# ವೀರಾಂಗಿಣಿ ಅಕ್ಕಮಹಾದೇವಿ

**ಶೀಲಾದೇವಿ ಎಸ್. ಬಿರಾದಾರ**

ಕನ್ನಡ ಅಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

**Received: 14-07-2024 ; Acepted: 10-08-2024 ; Published: 07-09-2024**

**DOI: https://doi.org/10.5281/zenodo.13725661**

**ABSTRACT:**

ಹಳೆಗನ್ನಡ ಸಾಹಿತ್ಯವು ರಾಜ್ಯಾಶ್ರಯದಲ್ಲಿಯೇ ಪಂಡಿತ ಪಾಮರರಿಗೆ ಮಾತ್ರ ಸಿಮಿತವಾಗಿತ್ತು. ಹನ್ನೆರಡನೆ ಶತಮಾನದಲ್ಲಿ ವಚನ ಸಾಹಿತ್ಯಯೂ ತೀರಾ ಸರಳ ಸಹಜವಾಗಿ ತಾವು ಬೋದಿಸುವುದು ಸಾಮಾನ್ಯನಿಗೂ ತಲುಪಬೇಕು ಎಂಬ ಆಶಯ ಹೊಂದಿದವರು. ಶಿವಶರಣರು ಶಿವಶರಣೆಯರ ಆಲೋಚನೆಗಳನ್ನು ಅನುಭವಗಳನ್ನು ವಿಚಾರಧಾರೆಗಳೆ ವಚನ. ಜನಸಾಮಾನ್ಯರ ಭಾಷೆಯಲ್ಲಿಯೆ ತಮ್ಮ ಭಾವನೆಗಳನ್ನು ಅನಿಸಿಕೆಗಳನ್ನು ತತ್ವಗಳನ್ನು ಹಾಗೂ ಅವರ ಆತ್ಮಾನುಭವಗಳೇ ವಚನರೂಪದಲ್ಲಿ ವ್ಯಕ್ತಪಡಿಸಿದ್ದು ವಚನ ಸಾಹಿತ್ಯ. ವಚನ ಸಾಹಿತ್ಯ ವಿಶ್ವಕ್ಕೆ ಕೊಡುಗೆಯಾಗಿ ನೀಡಿರುವುದು ಕನ್ನಡ ಸಾಹಿತ್ಯದ ಹೆಮ್ಮೆಯಾಗಿದೆ. ವಚನ ಸಾಹಿತ್ಯದಲ್ಲಿ ಕಾಣಿಸುವ ವಿಶಿಷ್ಟ ಪ್ರತಿಭೆಯ ಮಹಿಳೆ ಅಕ್ಕಮಹಾದೇವಿ. ಕನ್ನಡ ಸಾಹಿತ್ಯದ ಮೊದಲ ಕವಿಯತ್ರಿ ಮತ್ತು ವಚನಗಾರ್ತಿ, 12 ನೆಯ ಶತಮಾನದ ಪ್ರಪ್ರಥಮವಾಗಿ ಪುರುಷರಿಗೆ ಸಮಾನವಾಗಿ ನಿಂತು ಜ್ಞಾನ, ವೈರಾಗ್ಯ ಭಕ್ತಿ, ನೇರ ದಿಟ್ಟತನದಿಂದ ಅಂದಿನ ಕಾಲದಲ್ಲಿ ಹೆಣ್ಣು ಮನೆಯಿಂದ ಹೊರಬರಲು ಹೆದುರುತ್ತಿದ್ದ ಸಮಯದಲ್ಲಿ ಆಧ್ಯಾತ್ಮ ಲೋಕದ ಕಡೆ ಸಾಗಿದವಳು. ಚನ್ನಮಲ್ಲಿಕಾರ್ಜುನನ್ನು ದರ್ಶನಕಾಗಿ ಎಲ್ಲವು ತೋರೆದು ಕಲ್ಯಾಣ ಪ್ರವೇಶ ಮಾಡಿ ಹಲವು ಪರೀಕ್ಷೆಗಳನ್ನು ಒಡ್ಡಿದರು ಭಯಪಡದೆ ಅಲ್ಲಮಪ್ರಭುವರಿಗೆ ಉತ್ತರಿಸಿದ್ದು ಅಕ್ಕಮಹಾದೇವಿ. ಪುರುಷರಿಗೆ ಸಮಾನವಾಗಿ ಸಾಹಿತ್ಯ ರಚನೆ ಮಾಡಿದ ಕೀರ್ತಿ ಅಕ್ಕಮಹಾದೇವಿಗೆ ಸಲ್ಲುತ್ತದೆ. ಅಕ್ಕನ ಚಿಂತನೆಗಳು ಅವಳಾಡುವ ಮಾತುಗಳು ಇಂದು ನಮ್ಮ ಆಧುನಿಕ ಸಮಾಜಕ್ಕೆ ಅವಶ್ಯಕವಾಗಿದೆ. 12ನೆಯ ಶತಮಾನ ಇಡಿ ವಿಶ್ವಕ್ಕೆ ಮಾದರಿಯಾಗಿರುವುದು ಸಮಾನತೆ ನೆಲೆಯು ಅದಕ್ಕೆ ಸಾಕ್ಷಿಯಾಗಿದೆ. ಕೆಟ್ಟ ಗುಣಗಳು ತುಂಬಿದ ಮನುಷ್ಯ ಕೇವಲ ಮನುಷ್ಯನಾದರೆ ಸಾಲದು ಅವನಲ್ಲಿ ಶಿವಭಕ್ತಿ, ಕರುಣೆ, ದಯ, ಮಾನವೀಯ ಮೌಲ್ಯಗಳು ಹೊಂದಿದವರು ನಿಜವಾದ ಮನುಷ್ಯನಾಗಲು ಸಾಧ್ಯ ಎಂದು ಅಕ್ಕಮಹಾದೇವಿಯ ನಿಲುವಾಗಿತ್ತು. ಅಂದಿನಿಂದ ಮಹಿಳೆಯರಿಗೆ ಸಮಾನವಾಗಿ ಕಂಡವರು ಬಸವಾದಿ ಶರಣರು. ಹೆಣ್ಣು ಕೀಳಲ್ಲ ಅವಳು ಸಾಧನೆ ಮಾಡಬಲ್ಲಳು ಎಂದು ಸಾಧಿಸಿದ್ದು ತೋರಸಿದ್ದು ಅಕ್ಕಳು.

**KEYWORDS:**

ಅಕ್ಕಮಹಾದೇವಿ, ವಚನ ಸಾಹಿತ್ಯ, ಬಸವಣ್ಣ , ಅಲ್ಲಮಪ್ರಭು, ಶಿವಶರಣೆ, ಶರಣ ಚಳವಳಿ.

ಅಕ್ಕಮಹಾದೇವಿಯಂತ ಹಲವಾರು ಮಹಿಳೆಯರಿಗೆ ಸಮಾನವಾಗಿ ಕಂಡವರು ಬಸವಾದಿ ಶರಣರು. ಅವರಲ್ಲಿ ದಿಟ್ಟ ಮಹಿಳೆ ಅಕ್ಕನವರು ಸಮಾಜದಲ್ಲಿನ ಜನರನ್ನು ಕಂಡು ತಮ್ಮ ವಚನದಲ್ಲಿ ಮನುಷ್ಯ ವಿಷಪೂರಿತ ಗುಣಗಳು ತುಂಬಿದ ಮನುಷ್ಯ ಕೇವಲ ಮನುಷ್ಯನೆನಿಸಿಕೊಂಡರೆ ಸಾಲದು ಅವನಲ್ಲಿ ಶಿವಭಕ್ತಿ, ಕರುಣೆ, ದಯ, ಮಾನವೀಯ ಮೌಲ್ಯಗಳು, ಎಲ್ಲರು ಒಂದಾಗಿ ಬಾಳಬೇಕೆಂಬ ಆಶೆ ಹೊತ್ತಿದ್ದಾರೆ. ಅವರು ಹನ್ನೆರಡನೆಯ ಶತಮಾನದಲ್ಲಿ ತನ್ನ ಭಾಷಾ ಪಾಂಡಿತ್ಯ, ಶಿವಭಕ್ತಿಯಲ್ಲಿ ತುಂಬಾ ಶ್ರದ್ಧೆಯುಳ್ಳವರು. ಸಮಕಾಲೀನ ಪ್ರಜ್ಞೆ ಮತ್ತು ಸಾಮಾಜಿಕ ಕಳಕಳಿಯ ಕಲ್ಪನೆಗಳನ್ನು ಅವರ ವಚನಗಳು ನಮ್ಮ ಮುಂದೆ ತಂದು ನಿಲ್ಲಿಸುತ್ತವೆ. ಅಕ್ಕಮಹಾದೇವಿಯ ಚಿಂತನೆಗಳು, ಅವಳಾಡುವ ಮಾತುಗಳು ಇಂದು ನಮ್ಮ ಆಧುನಿಕ ಸಮಾಜಕ್ಕೆ ಅವಶ್ಯಕವಾಗಿದೆ. ವಚನ ಸಾಹಿತ್ಯದ ಕನ್ನಡದ ವಚನಗಾರ್ತಿ, ಹನ್ನೆರಡನೆಯ ಶತಮಾನದ ಪ್ರಪ್ರಥಮವಾಗಿ ಮಹಿಳಾ ಪ್ರತಿನಿಧಿಯಾಗಿ, ಪುರುಷನಿಗೆ ಸಮಾನವಾಗಿ ನಿಂತಿರುವ ಹಾಗೂ ಸಾಹಿತ್ಯ ರಚನೆ ಮಾಡಿದ ಕನ್ನಡ ಸಾಹಿತ್ಯದ ಮೊದಲ ಕವಿಯತ್ರಿ ಎಂದು ಕೀರ್ತಿಗೆ ಪಾತ್ರರಾದವರು ಅಕ್ಕಮಹಾದೇವಿ. ನಿರ್ಮಲಶೆಟ್ಟಿ ಮತ್ತು ಸುಮತಿಯ ಮುದ್ದಿನ ಮಗಳಾಗಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿಯಲ್ಲಿ ಜನಿಸಿದವರು. ಅಕ್ಕಳು ಚನ್ನಮಲ್ಲಿಕಾರ್ಜುನನೆಂಬ ಅಂಕಿತನಾಮದಿಂದ ವಚನಗಳನ್ನು ರಚನೆ ಮಾಡಿದವರು. ಜನಪ್ರಿಯವಾದ ಕೃತಿಯಾದ ಯೋಗಾಂಗ ತ್ರಿವಿಧಿ, ಸೃಷ್ಟಿಯ ವಚನ, ಮಂತ್ರಗೋಪ್ಯ ಮತ್ತು ಇತರ ವಚನಗಳು ರಚಿಸಿದ್ದಾರೆ. ಅಕ್ಕಮಹಾದೇವಿ ಚಿಕ್ಕ ವಯಸ್ಸಿನಲ್ಲೆಯೇ ಮನದಲ್ಲಿಯೇ ಮದುವೆಯಾಗಿ ಮಹಾದೇವಿಯಾಗಿ ಸಾಕ್ಷಾತ್ ಶಿವನನ್ನೆ ಪತಿ ಎಂದು ಸ್ವೀಕರಿಸಿ, ಚನ್ನಮಲ್ಲಿಕಾರ್ಜುನನ ಭಕ್ತಿಯಲ್ಲಿ ಲೀನನಾಗಿ ಲೌಕಿಕ ಜಗತ್ತನ್ನೇ ಧಿಕ್ಕರಿಸಿ, ಎಲ್ಲರಿಗೂ ಮಾದರಿಯಾಗಿ ಕೇಶಾಂಬರೆಯಾಗಿ ನಡೆದವಳು ಅಕ್ಕಳು.

ನಡುಗನ್ನಡ ಕಾಲಘಟ್ಟದ ವಚನ ಸಾಹಿತ್ಯದಲ್ಲಿ ಅಕ್ಕಮಹಾದೇವಿಯು ಶಿವಭಕ್ತೆ ಶರಣ ಚಳುವಳಿಯಲ್ಲಿ ಎತ್ತರದ ಚೇತನವಾಗಿ ಮೂಡಿಬಂದ ವ್ಯಕ್ತಿತ್ವ. ವಿಶಿಷ್ಟ ಸಂವೇದನೆಯ ವ್ಯಕ್ತಿತ್ವದವರಾಗಿ ಗಮನ ಸೆಳೆದಿದ್ದಾರೆ. ಬಲವಂತವಾಗಿ ಕೌಶಿಕ ಹೆಂಡತಿ ಮಾಡಿಕೊಂಡಿದ್ದ ಆತನನ್ನು ತಿರಸ್ಕಾರ ಮಾಡಿ ಚನ್ನಮಲ್ಲಿಕಾರ್ಜುನನೆ ತನ್ನ ಗಂಡ ಎಂದು ಆಧ್ಯಾತ್ಮಲೋಕದ ಗಂಡನನ್ನು ಹುಡುಕುತ್ತಾ ನಡೆದವಳು.

**ಲೋಕದ ಚೇಷ್ಟೆಗೆ ರವಿ ಬೀಜವಾದಂತೆ**
**ಕರಣಂಗಳ ಚೇಷ್ಟೆಗೆ ಮನಸ್ಸು ಬೀಜ**
**ಎನಗುಳ್ಳದೊಂದು ಮನ**
**ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ**
**ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ?**

ಆತ್ಮ ಪರಮಾತ್ಮನಲ್ಲಿ ಒಂದಾದಾಗ ಅಂತಹ ಭಕ್ತನಿಗೆ ಭವವಿಲ್ಲ, ಲೌಕಿಕ ಬಂದನದಲ್ಲಿ ಸಿಲುಕಿದವರಿಗೆ ಮುಕ್ತಿಯಿಲ್ಲ ಎಂದು ಹೇಳಿದ್ದಾರೆ. ಉಡುತಡಿಯಿಂದ ಎಲ್ಲಾವನ್ನೂ ತ್ಯಜಿಸಿ ಹೊರಡುವಾಗ ಹೇಗೆ ಬದುಕುವೇ? ಎಂದಾಗ ಅಕ್ಕಳು 'ಹಸಿವಾದರೆ ಭಿಕ್ಷಾನ್ನಗಳುಂಟು, ತೃಷೆಯಾದರೆ ಕೆರೆ ಹಳ್ಳಗಳುಂಟು' ಎಂದು ಸರಿಯಾಗಿ ಉತ್ತರ

ಕೊಟ್ಟಿದರಂತೆ. ಕೌಶಿಕನ ದೌರ್ಜನ್ಯಕ್ಕೆ ಒಳಗಾದ ಅಕ್ಕಮಹಾದೇವಿ ಪುರುಷನಿಗಿಂತ ಹೆಣ್ಣು ಕಡಿಮೆ ಇಲ್ಲ ಎಂಬುವುದು ಸಾಧಿಸಿ ತೋರಿಸಿದವರು. ಅಂದಿನ ಕಾಲದಲ್ಲಿ ಹೆಣ್ಣು ಮನೆಯಿಂದ ಹೊರಬರಲು ಹೆದರುತ್ತಿದ್ದ ಸಮಯದಲ್ಲಿ ಅಕ್ಕಮಹಾದೇವಿ ಆಧ್ಯಾತ್ಮಿಕ ಲೋಕದ ಕಡೆ ಸಾಗಿದವರು. ಅಸಹಾಯಕ ಸ್ಥಿತಿಯಲ್ಲಿ ಜೀವಿಸುತ್ತಿದ್ದ ಮಹಿಳೆಯರ ಬದುಕಿನ ನಿಲುವಿಗಾಗಿ ಶ್ರಮಿಸಿ ಶರಣೆ. ಪುರುಷರ ದೌರ್ಜನ್ಯ, ಅಟ್ಟಹಾಸಗಳನ್ನು ಪ್ರತಿಭಟಿಸಿದಳು.

**ನಡೆ ಶುಚಿ, ನುಡಿ ಶುಚಿ, ತನುಶುಚಿ,**
**ಮನಶುಚಿ, ಭಾವ ಶುಚಿ,**
**ಇಂತಿ ಪಂಚ ತೀರ್ಥಂಗಳಕೊಂಡು**
**ಮರ್ತ್ಯದಲ್ಲಿ ನಿಂದ ನಿಮ್ಮ ಶರಣರ ತೋರಿ**
**ಎನ್ನನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ?**

ನಡೆ ನುಡಿ ತನು ಮನ ಭಾವ ಶುದ್ಧವಾಗಿ ನಡೆಯುದಾಗಿ ಹೇಳಿ, ಒಬ್ಬ ಯೋಗಿಗೆ ಯೋಗಿಣಿಯಾಗಿ ಕಾಡಿತು, ಸವಣಂಗೆ ಸವಣಿಯಾಗಿ ಕಾಡಿತು. ಒಬ್ಬ ಯತಿಗೆ ಪರಾಕಿಯಾಯಿ ಮಾಯೆ ಚೆನ್ನಮಲ್ಲಿಕಾರ್ಜುನ ನಾನು ಯಾವತ್ತು ನಿನ್ನ ಮಾಯೆಗೆ ಅಂಜುವಳಲ್ಲ, ಅಳುಕುವಳಲ್ಲ ಇದು ನಾನು ನಿಮ್ಮ ಮೇಲೆ ಮಾಡುವ ಆಣೆಯಾಗಿದೆ ಎಂದು ಅಕ್ಕನು ಹೇಳುವ ಮಾತು ಇಂದು ಪ್ರತಿಯೊಬ್ಬ ಮನುಷ್ಯನಿಗೆ ಆದರ್ಶವಾಗಿದೆ.

ಒಬ್ಬ ಪುರುಷ ಪುರೋಹಿತರು ಸಮಾಜದಲ್ಲಿ ಅನಿಷ್ಟ ಪದ್ಧತಿಯ ಹೆಸರಿನಲ್ಲಿ ಪಂಡಿತ, ಮೇಧಾವಿ, ವಿದ್ವಾಂಸ ಎಂದು ಭೇದಭಾವ ಮಾಡಿ ಮಾತನಾಡುವುದನ್ನು ತಿರಸ್ಕರಿಸಿದರು. ನೀವು ನಿಮ್ಮ ಘನವೆತ್ತ ಪದವಿಗಳನ್ನು ನಿಮ್ಮ ಕೊರಳಲ್ಲಿ ಹಾಕಿಕೊಳ್ಳಿ ಎಂದು ಹೇಳುವ ಹಾಗೆ ಅಕ್ಕಮಹಾದೇವಿ ಒಬ್ಬ ಸ್ತ್ರೀಯಾಗಿದ್ದುಕೊಂಡು ಸಮಾಜದ ಅಂಕುಡೊಂಕು ತಿದ್ದಿವ ಕಾಯಕ ಮಾಡಿದ್ದಾರೆ. ಆಸೆ, ಅಮಿಷೆಯಿಂದ ಕೂಡಿದ ಈ ಲೋಕದಲ್ಲಿ ಒಂದನೊಂದು ಮಾಯೆಯಾಗಿ ಕಾಡುವುದು. ಪುರುಷನ ಆಸೆಗೆ ಹೆಣ್ಣು ಮಾಯೆ ಸ್ತ್ರೀ ಆಸೆಗೆ ಗಂಡು ಮಾಯೆಯಾಗಿ ಕಾಣುವುದು. ಗಂಡು-ಹೆಣ್ಣು ಎರಡು ಬಿಡಿಸಲಾಗದ ನಂಟಿನಿಂದ ಕೂಡಿರುವಂತಹವು. ಯಾವುದು ಮೇಲು ಅಲ್ಲ ಯಾವುದು ಕೀಳು ಅಲ್ಲ ಒಬ್ಬರ ಮುಂದೆ ಒಬ್ಬರು ಸಮಾನರಾಗಿ ಕಾಣುವರು ಆದರೆ ಚೆನ್ನಮಲ್ಲಿಕಾರ್ಜುನನೊಲಿದ ಶರಣರಿಗೆ ಯಾವುದು ಮಾಯೆಯಲ್ಲ ಎಂದು ಅಕ್ಕಮಹಾದೇವಿ ತಿಳಿಸುವರು. ಮಾಯೆ ಎಂಬುದು ಯಾರಿಗೂ ಬಿಟ್ಟಿರುವುದಿಲ್ಲ. ಶಿವನ ಆದಿಯಾಗಿ ಶರಣರನ್ನು ಮಾಯೆಯಾಗಿ ಕಾಡಿತ್ತು; ಆದರೂ ಸತ್ಯಕ್ಕೆ ಸಾವಿಲ್ಲ ಎನ್ನುವುದು ಅವರ ಜೀವನ ದರ್ಶನದಿಂದ ಈ ಪ್ರಪಂಚಕ್ಕೆ ತಾವು ಹೇಡಿಗಳಲ್ಲ, ಜೀವನ ಮೆಟ್ಟಿ ನಿಲ್ಲಬೇಕು ಎಂದು ತಿಳಿಸಿದಾರೆ. ಮೋಹ ಪರವಶಳಾಗದೆ ಅಕ್ಕಮಹಾದೇವಿ ಈ ಸಂಸಾರ ಎಂಬ ಹಂಗು ತೊರೆದು ಇಹಲೋಕದ ಗಂಡಂದಿರನ್ನು ಒಲೆಯೊಳಗಿಕ್ಕು ಎಂದು ಕೌಶಿಕನ ದೌರ್ಜನ್ಯಕ್ಕೆ ಒಳಗಾದ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನೆ ಸರ್ವಸ್ವವಾಗಿ ಮಾಡಿ ಕೊಂಡವಳು. ಚೆನ್ನಮಲ್ಲಿಕಾರ್ಜುನನ್ನು ಹುಡುಕುತ್ತಾ ಹುಡುಕುತ್ತಾ ಕೊನೆಗೆ ಶ್ರೀಶೈಲ ಕದಳಿಯ ವನ ಪ್ರವೇಶ ಮಾಡಿದಳು. ಬಸವಣ್ಣ ಕಲ್ಪಿಸಿದ ಸಮಾನತೆಯ ತತ್ವದಲ್ಲಿ ಭಾಗಿಯಾಗಿ ಕೆಲವು ದಿನಗಳು ಮಾತ್ರ ಕಲ್ಯಾಣದಲ್ಲಿ

ಉಳಿದು ನಂತರ ಶಿವಶರಣರ ಆದೇಶದಂತೆ ಮುನ್ನಡೆದ ವೀರಾಂಗಿಣಿ ಅಕ್ಕಮಹಾದೇವಿ.

ಸಮಾಜದಲ್ಲಿ ನೋವುಂಡು ಬೆಳೆದ ಅಕ್ಕಮಹಾದೇವಿ ಸ್ತುತಿ ನಿಂದನೆಗಳಿಗೆ ಅಂಜಬಾರದು ನಾವು ಹೇಗಿದ್ದರು ಈ ಲೋಕ ನಮಗೆ ನಿಂದೆ ಮಾಡುವುದು ಬಿಡುವುದಿಲ್ಲ. ಅದಕ್ಕಾಗಿ ಮಾನವರಾಗಿ ಹುಟ್ಟಿದ ನಾವು ಬೆಟ್ಟದಲ್ಲಿ ಮನೆಮಾಡಿ ಕ್ರೂರ ಮೃಗಗಳು ಬಂದು ನಮಗೆ ತಿನ್ನುತ್ತವೆ ಎಂದು ಅಂಜಿದರೆ ಈ ಸಮಾಜದಲ್ಲಿ ಆ ಮೃಗಗಳಿಗಿಂತಲೂ ಕ್ರೂರ ವ್ಯಕ್ತಿಗಳು ಇರುವುದು ಅರಿಯಬೇಕು. ಸಮುದ್ರದ ದಡದಲ್ಲಿ ಮನೆಯ ಮಾಡಿ ಅಲೆಗಳಿಗೆ ಹೆದರಬಾರದು, ಗದ್ದಲ ತುಂಬಿದ ಸಂತೆಯೆಂಬ ಈ ಪ್ರಪಂಚದಲ್ಲಿ ಮನೆಮಾಡಿರುವ ಮನುಷ್ಯ, ಶಬ್ದ, ಗದ್ದಲಕ್ಕೆ ನಾಚಿದರೆ ಹೇಗೆ. ಈ ಲೋಕದಲ್ಲಿ ಹುಟ್ಟಿ ಬಂದ ಬಳಿಕ ಸ್ತುತಿ ನಿಂದನೆಗಳು ಬರುತ್ತವೆ. ಹಾಗಂತ ಪರಿಪೂರ್ಣ ಜೀವನ ಮಾಡಲು ಸಾಧ್ಯವೇ? ಚೆನ್ನಮಲ್ಲಿಕಾರ್ಜುನ ದೇವನನ್ನು ಸ್ಮರಿಸುತ್ತ ಮನಸ್ಸಿನಲ್ಲಿ ಕೋಪ, ತಾಪಗಳು ಬಿಟ್ಟು ಸಮಾಧಾನದಿಂದ ಜೀವನ ಮಾಡಿಕೊಂಡು ಸದ್ಗತಿ ಪಡೆಯಬೇಕು ಎಂದಿದಾರೆ.

ಅಕ್ಕಮಹಾದೇವಿಯ ಜೀವನದಲ್ಲಿ ಕಲ್ಯಾಣ ಪ್ರವೇಶವು ಅತ್ಯಂತ ಮಹತ್ವದ್ದಾಗಿ ಕಂಡುಬರುತ್ತದೆ. ಕಲ್ಯಾಣ ಪ್ರವೇಶ ಮಾಡಿದ ಅಕ್ಕಮಹಾದೇವಿಗೆ ಹಲವು ಪರೀಕ್ಷೆಗಳನ್ನು ಒಡ್ಡಿದರು ಅಲ್ಲಮಪ್ರಭು. ಎಲ್ಲಾ ಬಗೆಯ ಪರೀಕ್ಷೆ ಗೆದ್ದವಳು ಅಕ್ಕಳು.

**ನಾಳೆ ಬರುವದು ನಮಗಿಂದೇ ಬರಲಿ**
**ಇಂದು ಬರುವುದು ನಮಗೀಗಲೇ ಬರಲಿ**
**ಆಗೀಗ ಎನ್ನದಿರು ಚನ್ನಮಲ್ಲಿಕಾರ್ಜುನ**

ಶರಣರು ಅಕ್ಕಮಹಾದೇವಿಯ ಆತ್ಮಸ್ಥೈರ್ಯ ಕಂಡು ಹೆಮ್ಮೆಪಟ್ಟವರು. ಎಂಥಾ ಸಂದರ್ಭವೇ ಎದುರಾಗಲಿ ಎಲ್ಲಕ್ಕು ಸಿದ್ದವಾಗಿ ನಿಂತಿದ್ದು ಅಕ್ಕ. ಸಮಾಜದಿಂದ ಯಾವ ಪದವಿ ಪುರಸ್ಕಾರ ಬಯಸಲಿಲ್ಲ ಕೇವಲ ಒಳ್ಳೆಯ ನಡೆ, ವಿನಯ, ಪ್ರಗತಿಶೀಲತೆಯನ್ನು ಸಮಾಜಕ್ಕೆ ಹಿಡಿದಳು. ಹಾವಿನಾಳ ಕಲ್ಲಯ್ಯ ಹೇಳುವಂತೆ:

**ಪರಮ ಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ**
**ಪರಮಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ**
**ಎನಗೆ ನಿಮ್ಮ ತೊತು ಸೇವೆಯ ಸಾಕು**
**ಮಹಾಲಿಂಗ ಕಲ್ಲೇಶ್ವರಾ**

**ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ?**
**ಧನವಿದ್ದು ಫಲವೇನು ದಯೆವಿಲ್ಲದನ್ನಕ್ಕ?**
**ಹಸುವಿದ್ದು ಫಲವೇನು ಹಯನಿಲ್ಲದನಕ್ಕ?**
**ರೂಪಿದ್ದು ಫಲವೇನು ಗುಣವಿಲ್ಲನ್ನಕ್ಕ?**
**ಅಗಲಿದ್ದು ಫಲವೇನು ಮನವಿಲ್ಲದನ್ನಕ್ಕ**
**ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ?**
**ಚೆನ್ನಮಲ್ಲಿಕಾರ್ಜುನಯ್ಯಾ**

ಮನುಷ್ಯನು ಸಾಧನೆಯ ಹಾದಿಯಲ್ಲಿ ನಡೆದರೆ ಮಾತ್ರ ಮುಕ್ತಿ ದೊರೆಯಲು

ಸಾಧ್ಯ. ಅದು ಬಿಟ್ಟು ಅನಾಚಾರದ ಅನಗತ್ಯ ಸಂಪ್ರದಾಯ, ಆಚರಣೆಯಿಂದ ಯಾವುದೆ ಪ್ರತಿಫಲದೊರೆಯಲಾರದು. ಈ ಮೇಲಿನ ವಚನದಲ್ಲಿ ಹೇಳುವ ಮರ ಇದ್ದು ನೆರಳೆ ಇಲ್ಲ, ಮನುಷ್ಯ ತಾನು ಬೆಳೆದು ಇತರರಿಗೆ ಆಶ್ರಯ ನೀಡದಿದ್ದರೆ ಪ್ರಯೋಜನವೇನು? ಸಂಪತ್ತು ಗಳಿಸಿದರೆ ಸಾಲದು ಬೇರೆಯವರ ಬಗ್ಗೆ ಮಾನವಿತೆ ಪ್ರೀತಿ ಕಾಳಜಿಯ ಗುಣಗಳು ಇಲ್ಲದಿದ್ದರೆ ನಾನಿದ್ದು ಫಲವೇನು? ಎಂದು ಪ್ರಶ್ನೆ ಮಹಾದೇವಿ ಅಕ್ಕನವರದು. ಬಸವಣ್ಣನವರು ತಮ್ಮ ವಚನವೊಂದರಲ್ಲಿ 'ದಯವೇ ಧರ್ಮದ ಮೂಲವಯ್ಯ ದಯಾಭಾವವಿರಬೇಕು ಎಂದಿದ್ದಾರೆ. ಆಕಳು ಇದ್ದರೆ ಸಾಲದು ಹಾಲು ಕೊಡಬೇಕು, ಸುಂದರವಾದ ಬಣ್ಣ ನೋಡಲು ಆಕರ್ಷಕ ದೇಹ ಹೊಂದಿದರು ಕೆಟ್ಟ ಮನಸ್ಸಿದ್ದರೆ ಮನುಷ್ಯನೆನಿಸಿಕೊಳ್ಳಲಾರ? ಮುಖ್ಯವಾಗಿ ಅವನಿಗೆ ಗುಣಗಳು ಇರಬೇಕು. ಅಗಲಿದ್ದು ಪ್ರಯೋಜನವಿಲ್ಲ ಬಾನವಿಲ್ಲದನ್ನಕ್ಕ ಜೊತೆಗೆ ನಾನಿದ್ದು ಪ್ರಯೋಜನವೇನು ಚೆನ್ನಮಲ್ಲಿಕಾರ್ಜುನ ಜ್ಞಾನದಿಂದ ಅರಿವು ಹೊಂದಿರಬೇಕು ಎಂದು ಅಂತರಂಗದ ಶುದ್ಧಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟರು ಕಟುವಾಗಿ ತನ್ನ ಮನದಾಳದ ಮಾತುಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಅಂದು ಅಕ್ಕಮಹಾದೇವಿಯು ಒಬ್ಬ ದಿಟ್ಟ ಮಹಿಳೆಯಾಗಿ ಅರಸನಾದ ಕೌಶಿಕನನ್ನು ಅರಮನೆಯನ್ನು ತೊರೆದು, ತಂದೆ-ತಾಯಿಯನ್ನು ಬಿಟ್ಟು , ಸಮಾಜದ ಕಡೆಗೆ ಮೋಹವ ತೋರೆದು, ಯಾರಿಗೂ ಅಂಜದೇ ಮುನ್ನುಗಿ ಆಧ್ಯಾತ್ಮ ಲೋಕದ ಗಂಡ ಚೆನ್ನಮಲ್ಲಿಕಾರ್ಜುನನ್ನು ಹುಡುಕುತ್ತ ಹೊರಟವರು. ಹೆಣ್ಣು ಅಂದರೆ ಕೀಳಾಗಿ ಕಾಣುವ ಹೊತ್ತಿನಲ್ಲಿ ಅಕ್ಕ ಧೈರ್ಯದಿಂದ ಲೋಕ ಕಲ್ಯಾಣಕಾಗಿ ಮುಂದೆ ಹೆಜ್ಜೆ ಇಟ್ಟು ಸಾಧನೆ ಮಾಡಿದ ಮೊದಲ ಮಹಿಳೆ, ವಚನಕಾರ್ತಿ ಎಂದರು ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು:**


1. ಮುಗಳಿ ರಂ. ಶ್ರೀ. (2010). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.
2. ಶೈಲಜಾ ಉಡಚಣ. (2007). ವಚನ ಸಾಹಿತ್ಯ ಮತ್ತು ಮಹಿಳೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು. ಮೈಸೂರು.
3. ಮಲ್ಲಪ್ಪ ಎಂ. ಮಾನೆಗರ (ಸಂ). (2021). ನಡುಗನ್ನಡ ಸಾಹಿತ್ಯ. ಉದಯೋನ್ಮುಖ ಯುವ ಬರಹಗಾರರ ಬಳಗ. ಕಲಬುರಗಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.